ನಡೆಸಿದ್ದರು. ಅವರ ಸಂಗಡ ಕಿರಿಯ ವೈದ್ಯ ಡಾ. ಸಜ್ಜನ ಇದ್ದರು. ಬೆಂಗಳೂರಿನಲ್ಲಿ ಪ್ರತಿಷ್ಠಿತ ಆಸ್ಪತ್ರೆಯಲ್ಲಿ ಅನುಭವ ಉಳ್ಳವರು. ಸಂಕೇಶ್ವರ ತಮ್ಮ ಜೊತೆಗಿನ ಈ ಕಿರಿಯ ವೈದ್ಯ ಸಜ್ಜನರೊಂದಿಗೆ ವಿಶಿಷ್ಟ ಕಾಯಿಲೆಗಳ ಬಗ್ಗೆ ಯಾವಾಗಲು ಚರ್ಚಿಸುತ್ತಿದ್ದರು. ರಾಮಗೊಂಡ ಇದನ್ನು ಕಂಡಿದ್ದ.

ಸವಿತಾಳ ಸಂಗಡ ರೂಮ್‌ನಲ್ಲಿದ್ದಾಗ ರಾಮಗೊಂಡನಿಗೆ ನರ್ಸ್‌ರಿಂದ ಕರೆ ಬಂದಿತ್ತು. ಆತ ಮಗಳ ಕಾಲು ಒತ್ತುತ್ತಿದ್ದ. ಆಗ ಬಂದ ನರ್ಸ್ ನೀವು ಒಬ್ಬರೇ ಬಂದು ಸಂಕೇಶ್ವರರನ್ನು ಕಾಣಬೇಕೆಂದು ಹೇಳಿ ಹೋದರು. ಆ 'ಒಬ್ಬರೇ' ಎಂಬ ನುಡಿ ಕೇಳಿದ ಕ್ಷಣದಿಂದಲೇ ಆತನಿಗೆ ಅಸಾಧಾರಣ ಗಾಬರಿ ಹುಟ್ಟಿತ್ತು. ಮತ್ತು ಆಳದಲ್ಲಿ ಎಂಥದೋ ಹೇಳಿಕೊಳ್ಳಲಾಗದ ಕಸಿವಿಸಿ. ಅಳುಕಿಂದ ಅವನ ಮನೋಸ್ಥಿತಿ ಪಾತಾಳಕ್ಕಿಳಿದಿತ್ತು.

ರಾಮಗೊಂಡ ಅವರತ್ತಲೇ ಕಣ್ಣು ನೆಟ್ಟಿದ್ದರು. ಯಾವಾಗ ಕರೆಯುತ್ತಾರೋ? ಅದೇನು ಹೇಳುತ್ತಾರೋ? ಎಂಥ ಖೊಟ್ಟಿ ನಶೀಬು ಕಾದಿದೆಯೋ? ಎದೆ ಬಡಿತ ಜೋರು ಹೊಡೆದು ಕೊಳ್ಳುತ್ತಿತ್ತು. ಡಾ.ಸಂಕೇಶ್ವರ ಬರ ಹೇಳಿದರು.

ರಾಮಗೊಂಡ ಒಳ ಹೋದ. ಕೂರುತ್ತಾ, 'ನಮಸ್ಕಾರರಿ...' ಅಂದ. 'ಕೂಡ್ರಿ...' ಅಂದರು. ನಗುಮೊಗವು ಅವರ ಚಹರೆಯ ಸ್ವಭಾವವೋ ಏನೋ?

'ನಿಮ್ಮ ಮಗಳ ಕೇಸ್ ಎಲ್ಲಾ ಸ್ಟಡಿ ಮಾಡೇನಿ... ಎಲ್ಲಾ ರಿಪೋರ್ಟ್ಸ್ ನೋಡೇನಿ... ನಾನೂ ಇಲ್ಲಿ ಸ್ಕ್ಯಾನ್ ಮಾಡಿಸೇನಿ... ಕೇಸ್ ಸ್ವಲ್ಪ ಕ್ರಿಟಿಕಲ್... ಹೊಟ್ಟೆ ಒಳಗ ನೀರು ತುಂಬ್ಯಾವು... ನೀರು ತುಂಬಿರದಿದ್ದರ ಛಲೋ ಇತ್ತು. ಅದು ಒಳ್ಳೆ ಲಕ್ಷಣ ಅಲ್ಲ...' ಅವರು ಹೇಳುತ್ತಿದ್ದರು. ಇವನ ಕಿವಿ ಕೇಳಿಸಿಕೊಳ್ಳುತ್ತಿತ್ತು. ಆ ಮಾತುಗಳನ್ನು ಕೇಳಿಸಿಕೊಂಡಂತೆ ರಾಮಗೊಂಡನಿಗೆ ಒಮ್ಮೆಲೆ ಕಪಕಪ ಹೊಟ್ಟೆ ಕಡೆದು ಬೈಲಕಡೆಗೆ ಬಂದಂತಾಯಿತು. ಕ್ಷಣ ಹೊತ್ತು ಹೃದಯ ಮತ್ತು ದೇಹ ಕಂಪಿಸಿತು. ನಾಲಗೆ ಒಣಗಿತು. ತಲೆ ಸುತ್ತಿದಂತೆನಿಸಿತು. ಮುದ್ದುಕೂಸಿನ ಚಿತ್ರಗಳು ಪಟಪಟನೆ ಕಣ್ಣೆದುರು ಗಿರಕಿ ಹೊಡೆಯಹತ್ತಿದವು. ಆದರೆ, ಥಟ್ಟನೆ ರಾಮಗೊಂಡ ಸುಧಾರಿಸಿಕೊಂಡ. ಈ ಪ್ರಸಂಗವನ್ನು ಎದುರಿಸುವುದು ಅನಿವಾರ್ಯವಾಗಿತ್ತು. ಮನಸ್ಸು ಗಟ್ಟಿ ಮಾಡೊಳ್ಳಲೇಬೇಕಿತ್ತು. ಅವರು ಮಾತು ಮುಂದುವರಿಸಿದರು.

ಒಂದು ಬಿಳಿ ಕಾಗದ ಎತ್ತಿಕೊಂಡರು. ಆತನೆದುರು ಇಟ್ಟರು. ಗೆರೆ ಎಳೆದರು. ಪೆನ್ನನ್ನು ನಡುವೆ ಇಟ್ಟು ಗುರುತು ಮಾಡಿದರು.

'ಇಲ್ನೋಡ್ರಿ... ನಿಮ್ಮ ಮಗಳು ಇಲ್ಲಿ ಅದಾಳ...' ಎಡಗಡೆಗೆ ಪೆನ್ನು ಹೊರಳಿಸಿ - 'ಈ ಕಡೆಗೆ ಹೋದರ ಶೀ ಮೇ ಬಿ ಡೈ... ಅಥವಾ ...' ಬಲಗಡೆಗೆ ಹೊರಳಿಸಿ- 'ಇತ್ತ ಸಾಗಿದರ ಶೀ ಮೇ ಸರ್ವೈವ್ !... ಹೀಂಗದ ಸದ್ಯದ ಪರಿಸ್ಥಿತಿ... ವಿ ವಿಲ್ ಟ್ರೈ ಅವರ್ ಬೆಸ್ಟ್ ... ಮೆಡಿಸಿನ್‌ಗೆ ಆಕಿ ಹೆಂಗ ರೆಸ್ಪೊಂಡ್ ಮಾಡತಾಳೋ ಅದರ ಮ್ಯಾಲ ಡಿಪೆಂಡ್ಸ್...' ಅಂದರು. ಆತನ ಹಣೆಯ ಮೇಲೆ ಬೆವರ ಹನಿ ಒಡೆದವು. ಕರ್ಚೀಫಿನಿಂದ ಒರೆಸಿಕೊಂಡ. ಡಾ. ಸಜ್ಜನ ಏನೋ ಟಿಪ್ಪಣಿ ಮಾಡಿಕೊಳ್ಳುತ್ತಿದ್ದರು.

'ಸರ್, ನೀವಾ ನಮಗ ದ್ಯಾವರ ಇದ್ದಂಗ... ಯಾನಾರ ಮಾಡಿ ನನ್ನ ಮಗಳನ್ನ ಉಳಿಸಿರಿ... ನಿಮಗ ಕೈ ಮುಗಿದ ಕೇಳಕೋತ್ಯಾನ...' ಆತನ ದನಿಯಲ್ಲಿ ಕಂಪನವಿತ್ತು ಮತ್ತು ಕೈ ನಡುಗುತ್ತಿತ್ತು. ಚಾಕರಿ ಮಾಡಿ ಬಂದ ದೈವವನ್ನು ಮನದೊಳಗೆ ನೆನೆದ. 'ದ್ಯಾವರ ಕಂದವ್ವನ ಕಾಪಾಡಪ್ಪೋ' ಹಲುಬಿದ.

'ಈ ಕ್ಷಣದಿಂದನ ನಮ್ಮ ಟ್ರೀಟ್‌ಮೆಂಟ್ ಶುರು ಮಾಡೇವಿ...' ರಾಮಗೊಂಡನ ಸ್ಥಿತಿಯನ್ನರಿತ ಡಾ. ಸಂಕೇಶ್ವರ ಮುಂದುವರೆದು,

'ಲಿವರ್ ಟ್ರಾನ್ಸ್‌ಪ್ಲಾಂಟ್ ಒಂದ ಆಪ್ಷನ್ ಅದ... ಮಾಡಬೋದು... ಬಟ್ ನಿಮ್ಮ ಫ್ಯಾಮಿಲಿ ಒಳಗ ನಿಮ್ಮದು ಫ್ಯಾಟಿ ಲಿವರ್ ಕಾಣತೈತಿ... ಹೊಂದೋದಿಲ್ಲ... ಯಾವುದಕ್ಕೂ ಬೆಂಗಳೂರಿನ ಒಂದ ಹಾಸ್ಪಿಟಲನ ಡಾಕ್ಟರ್‌ರಿಗೆ ಎನ್‌ಕ್ವಾಯರಿ ಮಾಡಿ ಇಡತೀನಿ... ಥರ್ಟಿ ಫೈವ್ ಲ್ಯಾಖ್ ಒವರ್ ಆಲ್ ಆಗಬೋದು..."

ಆ ಮೂವತ್ತೈದು ಲಕ್ಷ ಕಿವಿ ಮೇಲೆ ಬಿದ್ದೊಡನೆ ನೆಲವೇ ಕುಸಿಯಿತು. ಪ್ರಸಂಗ ಬಂದರೆ ತನ್ನ ಮನೆಯನ್ನು ಮಾರಿ ಬಿಡೋಣ ಎಂದೂ ಆಲೋಚಿಸಿದ. ಹೇಗಾದರೂ ತನ್ನ ಕೂಸನ್ನ ಉಳಿಸಿಕೊಳ್ಳಲೇಬೇಕೆಂದು ಮನಸ್ಸು ಗಟ್ಟಿ ಮಾಡಿದ.